ಎಂದು ತಿಳಿಯಿತು. ಅಲ್ಲಿ ತನಕ ಅವನು ಹೋಗಲು ಸಾಧ್ಯವಿರಲಿಲ್ಲ. ಅವರಿಲ್ಲದೆ ಮಂಕಾಗಿದ್ದ. ಯಾರಲ್ಲೂ ಕೇಳುವಂತಿರಲಿಲ್ಲ. 'ಆ ಸೂಳೇರ ಸಾವಾಸ ನಿನಗ್ಯಾಕ್ಲಾ... ನೋಡ್ದಾ ನಿನ್ನಾ ಆಗ್ಲೇ ಬಲುತು ಬುಟ್ಟಾ... ಹೋಗೋಗ್ಲ' ಎಂದು ಹೆದರಿಸಿದ್ದರು. ಆತ ಹೈಸ್ಕೂಲು ದಾಟುತ್ತಿದ್ದ ಅವರಪ್ಪನ ನರಕದಿಂದ ದೂರಾಗುವ ಆಲೋಚನೆಗಳು ಅವನಲ್ಲಿ ಜಾಗೃತ ಆಗಿದ್ದವು. ಊರು ಕೆಟ್ಟದ್ದು; ಈ ಹಳ್ಳಿ ಬಿಟ್ಟು ತೊಲಗು. ಆಗ ನಿನಗೆ ದಾರಿ ಸಿಗುತ್ತದೆ ಎಂದು ಜನ ಅವನಿಗೆ ಬುದ್ಧಿ ಹೇಳುತ್ತಿದ್ದರು. ಕಣ್ಣಾ ಮುಚ್ಚಾಲೆ ಆಟ ಆಡಿ ಅವರ ಬಿಟ್ಟು ಇವರ ಬಿಟ್ಟು ಅವರ್‍ಯಾರು ಎಂದು ಕೇಳುವಷ್ಟರಲ್ಲಿ ಅವನು ಪ್ರಾಯಕ್ಕೆ ಬಂದುಬಿಟ್ಟಿದ್ದ. ಅತ್ತೆಯರು ಊರನ್ನು ಮರೆತು ಆ ಪೇಟೆಯನ್ನೂ ಬಿಟ್ಟು ಮಂಡ್ಯದ ಯಾವುದೋ ಒಂದು ಬಣ್ಣದ ನಾಟಕದವರ ಮನೆ ಸೇರಿಕೊಂಡಿದ್ದರು. ಆತ ಹಳ್ಳಿಬಿಟ್ಟು ಮೈಸೂರು ಸೇರಿ ಕಾಲೇಜು ಮುಗಿಸಿ ಎಂ.ಎ ಸೇರಿ ಅದನ್ನೂ ಯಶಸ್ವಿಯಾಗಿ ದಾಟಿ ಮುಂದೆ ಹೋಗುವಷ್ಟರಲ್ಲಿ ಓದಿ ಓದಿಯೊ ಇಲ್ಲವೇ ಯೋಚಿಸಿ ಚಿಂತಿಸಿ ನೊಂದು ಬೆಂದಿದ್ದರಿಂದಲೊ ಏನೋ ಅವನ ತಲೆಕೂದಲು ಉದುರಿ ಅಪರಿಚಿತನಂತಾಗಿಬಿಟ್ಟಿದ್ದ. ತನ್ನ ಊರು ಕೇರಿ ಅತ್ತೆಯರನ್ನೇ ಮರೆತುಬಿಟ್ಟಿದ್ದ. ಥೀ; ಅಂತಾ ಬದುಕಿನ ಭೀಕರ ದವಡೆಯಿಂದ ಹೇಗೆ ತಪ್ಪಿಸಿಕೊಂಡೆ ಎಂದು ಸ್ವಮರುಕದಲ್ಲಿ ನರಳುವಾಗ ಅತ್ತೆಯರ ಪಾಡು ನೆನಪಾಗಿ ಕರಗಿ ಅವರ ಆ ದಂಧೆಯನ್ನೇ ನೆಪವಾಗಿಟ್ಟುಕೊಂಡು ತನ್ನದೇ ಕಥೆಯನ್ನು ಬರೆದು ಪತ್ರಿಕೆಗೆ ಅಂಜುತ್ತ ಕಳಿಸಿಬಿಟ್ಟಿದ್ದ. ಸಹಜ ಸ್ಫೂರ್ತಿಯಲ್ಲಿ ಅವರವರ ಹೆಸರಲ್ಲೇ ನೇರವಾಗಿ ಆರ್ದ್ರವಾಗಿ ಕಥೆ ಬರೆದಿದ್ದ. ಅದು ಪ್ರಕಟವಾಗಿ ಹರಡಿ ತಲುಪಿ ಅವರು ಅವನು ಓದುತ್ತಿದ್ದ ಕ್ಯಾಂಪಸ್ಸಿನ ತನಕ ಹುಡುಕಿಕೊಂಡು ಹೋಗುವಂತಹ ಫಜೀತಿ ಉಂಟಾಗಿತ್ತು. ಹೇಗೊ ಅವರಿಂದ ತಪ್ಪಿಸಿಕೊಂಡಿದ್ದ. ಥೀ; ಅತ್ತೆಯರು ಹುಡುಕಿಕೊಂಡು ಬಂದು ಮಾನ ಕಳೆದರೆಂದು ಸಿಟ್ಟಾಗಿದ್ದ. ಏನೋ... ಹೋಗಿ ಅಂತಹ ಹಳ್ಳಿಯ ಡಗಾರ್‌ಗಳ ಸಹವಾಸ ಮಾಡಿದ್ದೀಯಲ್ಲಾ... ಅವರು ಯಾರೋ... ಬೇರೆ ಯಾರೂ ಸಿಗಲಿಲ್ಲವೆ ನಿನಗೆ ಎಂದು ಆಡಿಕೊಂಡಿದ್ದರು. ಸದ್ಯ ಅವನ ಅತ್ತೆಯರು ತಮ್ಮ ಸಂಬಂಧವನ್ನು ಹೇಳಿಕೊಂಡಿರಲಿಲ್ಲ. ಹಾಸ್ಟೆಲಿನ ಹುಡುಗರು ಅವರನ್ನು ರೂಮಿಗೆ ಕರೆದಿದ್ದರೂ ಅವರು ಹೋಗಿರಲಿಲ್ಲ. ಅವನನ್ನು ಕರೆಸುತ್ತೇವೆ ಬನ್ನಿ ಎಂದು ಒಂದು ಚಾನ್ಸ್‌ಗಾಗಿ ಒತ್ತಾಯಿಸಿದ್ದರು.

ಅವನಿಗೆ ಸಂಕಟವಾಗಿತ್ತು. ಎಲ್ಲ ನೆನಪಾಗಿತ್ತು. ಆ ಉನ್ನತ ಶಿಕ್ಷಣದ ವಾತಾವರಣವೂ ವಿಕಾರವಾಗಿತ್ತು. ಯಾರನ್ನೂ ದೂರುವಂತಿರಲಿಲ್ಲ. ಅವರು ಯಾರೋ ನನಗೆ ಗೊತ್ತಿಲ್ಲ ಎಂದುಬಿಟ್ಟಿದ್ದ. ಯಾರೋ ಜವಾನ ಕರೆದು ಅವರ ವಿಚಾರಿಸಿದ್ದ. ಅಲ್ಲೂ ಅವರು ಅವನ ಬಗ್ಗೆ ಏನೂ ಹೇಳಿರಲಿಲ್ಲ. ತಾನು ಕಥೆ ಬರೆದಿರುವುದು ಗೊತ್ತಾಗಿಯೇ ಅವರು ಬಂದಿರುವುದು... ತಾನಿನ್ನು ಕಥೆಗಳ ಸಹವಾಸಕ್ಕೆ ಹೋಗಬಾರದು ಎಂದು ತಲೆ ತಗ್ಗಿಸಿದ. ಏನೋ ಅಪಮಾನ, ಕಿಚ್ಚು, ಸಂಕಟ, ಒಂಟಿತನ ಕಾಡಿದವು. ನಮಗೆ ಇವೆಲ್ಲ ಎಷ್ಟು ಹಳೆಯ ಸಂಗತಿಗಳು... ಚಿಂತೆ ಯಾಕೆ... ಬಿಟ್ಟುಬಿಡು ಎಂದಿತ್ತು ಮನಸ್ಸು. ನೋವು ಮರೆಯಾಯಿತು. ಊರು ಮತ್ತೆ ಕೆಟ್ಟದು ಎನಿಸಿತು. ಊರಿಗೆ ಹೋಗಲು ಭಯವಾಯಿತು. ಹಗಲಿರುಳು ಕೂತು ಓದಿ ಪರೀಕ್ಷೆ ಬರೆದ. ಮಾಯಾವಿ ಕೆಲಸ ಸಿಕ್ಕಿಯೇಬಿಟ್ಟಿತು. ಮಂಡ್ಯದ ಪಿ.ಜಿ.ಸೆಂಟರಲ್ಲಿ ಅಧ್ಯಾಪಕನಾಗಿ ಎಲ್ಲರ ಗಮನ ಸೆಳೆದ. ಅವನಿಗಿದ್ದ ಕೀಳರಿಮೆಗಳೆಲ್ಲ ಮಾಯವಾದವು. ಅವನ ಸುತ್ತ ಹುಡುಗಿಯರು ಸುತ್ತಿಕೊಂಡರು. ಪ್ರಾಯದ ಅಧ್ಯಾಪಕ ಕಥೆಗಾರನಂತೆ ಎಂದು ವಿದ್ಯಾರ್ಥಿನಿಯರಿಗೆ ಮೆಚ್ಚಿನವನಾಗಿದ್ದ. ಮಂಡ್ಯದ ಆಚೆ ಒಂದು ಹಳ್ಳಿಯಲ್ಲಿದ್ದ ಆ ಪಿ.ಜಿ. ಸೆಂಟರಿಗೆ ಹೋಗಿ ಬರಲು ಒಂದೇ ಬಸ್ಸು ಬರುತ್ತಿದ್ದುದು. ಹುಡುಗಿಯರ ನಡುವೆ ಆತ ಪ್ರತಿದಿನ ಮೋಹದಲ್ಲಿ ಮೈಸೂರಿಗೂ ಮಂಡ್ಯಕ್ಕೂ ಅಡ್ಡಾಡುತ್ತಿದ್ದ. ಹೀಗೆ ದಿನಗಳು ಜಾರಿ ಹೋಗುತ್ತಿದ್ದವು. ಆ ಅತ್ತೆಯರೂ ಅವನನ್ನು ಮರೆತು ಸುಮ್ಮನಾಗಿದ್ದರು. ಅದಾಗಲೇ ಅವರು ಆಕರ್ಷಣೆ ಕಳೆದುಕೊಳ್ಳುತ್ತಿದ್ದರು. ಆ ಅಕ್ಕತಂಗಿಯರು ರಕ್ಷಣೆ ಇರುತ್ತದೆ ಎಂದು ಒಟ್ಟಾಗಿಯೇ ವ್ಯವಹಾರ ನಡೆಸುತ್ತಿದ್ದರು. ಅವರನ್ನು ಆ ಊರಿನ ಜನ ಮರೆತುಬಿಟ್ಟಿದ್ದರು. ಅವರ ಪಾಳು ಮನೆ ಅನಾಥವಾಗಿತ್ತು. ಆದರೂ ಆ ಊರಿನ ಆ ಹೊಳೆ, ನೀಲಿ ನೀರ ಅಲೆಗಳ ತಾವರೆ ಹೂಗಳ ಕೆರೆ; ಬಣ್ಣದ ನೀರಕ್ಕಿಗಳ ರಮ್ಯವಾದ ಚಿನ್ನದ ಬಣ್ಣದ ಭತ್ತದ ಗದ್ದೆ ಬಯಲು; ಅವರ ಕನಸಲ್ಲಿ ಹಾಗೇ ತಂಗಾಳಿಯಲ್ಲಿ ತೊನೆದಾಡುತ್ತ ಯಾವಾಗ ತನ್ನತ್ತ ಬರುವಿರಿ ಎಂದು ಕೇಳುತ್ತಿದ್ದವು.